# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.

**OS No. 61/2019**

**PW: 1**

**ದಿನಾಂಕ 01-12-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಶ್ರೀ. ಎಸ್.ಜಿ.ಕೆ ವಕೀಲರಿಂದ :**

ನಮ್ಮ ಜಮೀನದ ಸರ್ವೆ ನಂ. 394 ಅಂತಾ ಇರುತ್ತದೆ. ಆದರ ಹಿಸ್ಸಾ ನಂಬರ ಮಾಹಿತಿ ಇಲ್ಲ. ಸರ್ವೆ ನಂ. 394 ರಲ್ಲಿ ಎಷ್ಟು ಪಟ್ಟಿಗಳು ಆಗಿರುತ್ತವೆ ಅಂತಾ ನನಗೆ ಮಾಹಿತಿ ಇಲ್ಲ. ಸರ್ವೆ ನಂ. 394 ರಲ್ಲಿ ಯಾವ ಪಟ್ಟಿ ಯಾವ ದಿಕ್ಕಿನ ಕಡೆಗೆ ಇರುತ್ತದೆ ಅಂತಾ ನನಗೆ ಮಾಹಿತಿ ಇಲ್ಲ. ಪ್ರತಿವಾದಿಯರ ಜಮೀನಿನ ಪೂರ್ವ ಬದಿಗೆ ನನ್ನ ಜಮೀನು ಇರುತ್ತದೆ. ನನ್ನ ಜಮೀನಿನ ಪೂರ್ವ ಬದಿಗೆ ಸರ್ವೆ ನಂ. 392 ಶಿವಪ್ಪ ರೇವಪ್ಪ ಗಿಣ್ಣಿ ರವರ ಜಮೀನು ಇರುತ್ತದೆ. ಇನ್ನೊಂದು ಸರ್ವೆ ನಂ. 391 ಶಿವಪ್ಪ ರೇಟಪ್ಪ ಗಿಣ್ಣಿ ರವರಿಗೆ ಸಂಬಂಧಿಸಿದ್ದು, ಅದು ನನ್ನ ಜವೀನಿನ ಪೂರ್ವ ಬದಿಗೆ ಇರುತ್ತದೆ. ಸರ್ವೆ ನಂ. 391 ಮತ್ತು 392 ರ ಪೂರ್ವ ಬದಿಗೆ ಉತ್ತರ-ದಕ್ಷಿಣವಾಗಿ ಒಂದು ಹರಿ ಇರುತ್ತದ ಎಂದರೆ ಸರಿ. ಸದರಿ ಹರಿ ಮಸಳಿ ಹಾದಿಗೆ ಬಂದು ಸೇರುತ್ತದೆ ಎಂದರೆ ಸರಿಯಲ್ಲ. ಉಪ್ಪಾರ ವಸತಿ ನಮ್ಮ ಜಮೀನಿನ ಪೂರ್ವ ಬದಿಗೆ ಸರ್ವೆ ನಂ. 391 ಮತ್ತು 392 ರ ಪೂರ್ವ ಬದಿಗೆ ಬರುತ್ತದೆ ಎಂದರೆ ಸರಿ. ಉಪ್ಪಾರ ವಸತಿಗೆ ಹೋಗಲು ಮಸಳಿ ಸರ್ಕಾರಿ ರಸ್ತೆಯಿಂದ ಒಂದು ರಸ್ತೆ ಇರುತ್ತದೆ ಎಂದರೆ ಸಾಕ್ಷಿ ಕಚ್ಚಾ ರಸ್ತೆ ಇರುತ್ತದೆ ಅಂತಾ ನುಡಿಯುತ್ತಾರೆ. ಸದರಿ ರಸ್ತೆ ಮುಖಾಂತರ ಸರ್ವೆ ನಂ. 391 ಮತ್ತು 392 ಹೋಗುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ. 391 ಮತ್ತು 392 ರವರು ಪಶ್ಚಿಮ ಬಾಂದರ ಗುಂಟಾ ಬಂದು ಸರ್ವೆ ನಂ. 391 ಮತ್ತು 392 ಕ್ಕೆ ಬರುತ್ತಾರೆ. ಸರ್ವೆ ನಂ. 387/1 ಬಸಲಿಂಗಪ್ಪರವರ ಜಮೀನಿನಲ್ಲಿ ಹಾಯಿದು ಬರುತ್ತಾರೆ. ಸರ್ವೆ ನಂ. 391 ಮತ್ತು 392 ರ ಪಶ್ಚಿಮ ಬಾಂದರಕ್ಕೆ ಪೂರ್ಣದಿಂದ ಪಶ್ಚಿಮಕ್ಕೆ ಹೋಗಿ ತಮ್ಮ ಜಮೀನಿಗೆ ಹೋಗಿ ಕೂಡುತ್ತಾರೆ. ಬಸಲಿಂಗಪ್ಪನ ಪಟ್ಟಿಯಿಂದ ದಕ್ಷೀಣಕ್ಕೆ ಬಂದು ಶ್ರೀಶೈಲ ಸರ್ವೆ ನಂ. 389 ಮತ್ತು 388 ಪಟ್ಟಿಯ ಪೂರ್ವದಿಂದ ಪಶ್ಚಿಮಕ್ಕೆ ಹೋಗಿ ಹರಿಗೆ ಕೂಡುತ್ತಾರೆ ಎಂದರೆ ಸರಿ. ಮಸಳಿ ರಸ್ತೆಯಿಂದ ಹರಿ ಮೂಲಕ ಬಂದು ಸರ್ವೆ ನಂ. 388 ದಕ್ಷೀಣ ದಿಕ್ಕಿನಲ್ಲಿ ಬಂದು ಬಸಲಿಂಗಪ್ಪನ ಪಟ್ಟೆಯ ಪಶ್ಚಿಮ ದಿಕ್ಕಿಗೆ ಬಂದು, ಅಲ್ಲಿಂದ ಪೂರ್ಣ ದಿಕ್ಕಿಗೆ ಹೊರಳಿ ಸರ್ವೆ ನಂ. 391 ಮತ್ತು

392 ಜಮೀನಿಗೆ ಹೋಗುತ್ತಾರೆ ಎಂದರೆ ಸರಿ. ಸದರಿ ರಸ್ತೆ ಗಾಡಿ ದಾರಿ ಎಂದರೆ ಸರಿ. ಸರ್ವೆ ನಂ.394/3 ಪೂರ್ವ ಬದಿಗೆ ಸರ್ವೆ ನಂ.391 ಮತ್ತು 392 ಜಮೀನುಗಳು ಇದ್ದು, ಅವುಗಳ ಬಾಂದರ ಹೊಂದಿಕೊಂಡು ಇರುತ್ತವೆ ಎಂದರೆ ಸರಿ. ಸದರಿ ಬಾಂದರ ಗುಂಟಾ ಸರ್ವೆ ನಂ. 391 ಮತ್ತು 392 ರ ಜಮೀನಿನ ಮಾಲೀಕರು ತಮ್ಮ ಜಮೀನುಗಳಿಗೆ ಹೋಗುತ್ತಾರ ಎಂದರೆ ಸರಿ. ಸರ್ವೆ ನಂ. 391 ಮತ್ತು 392 ರ ಜಮೀನಿನ ಮಾಲೀಕರು ನನ್ನ ದೊಡ್ಡಪ್ಪನ ಮಕ್ಕಳು.

ಸರ್ವೆ ನಂ. 390/1 ರಿಂದ 394/2, 394/1 ರ ಬದಿ ಹಾಥ ನಕಾಶೆಯಲ್ಲಿ ತೋರಿಸಿದಂತೆ ದಾರಿ ಇರುತ್ತದೆ ಅಂತಾ ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಹಾಥ ನಕಾಶೆಯಲ್ಲಿ ತೋರಿಸಿರುವಂತೆ ಇ.ಎಫ್.ಜಿ.ಹೆಚ್.ಐ ಜಾಗದಲ್ಲಿ ರಸ್ತೆ ಇರುತ್ತದೆ ಅಂತಾ ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನಾನು ಸಹ ಸದರಿ ರಸ್ತೆ ಸರ್ವೆ ನಂ. 390/1, 394/2 ರ ಪಕ್ಕದಲ್ಲಿರುವ ರಸ್ತೆ ಮೂಲಕ ಹಾಯಿದು ನನ್ನ ಜಮೀನಿಗೆ ಹೋಗುತ್ತೇನೆ ಎಂದರೆ ಸರಿಯಲ್ಲ. ಹಾಥ ನಕಾಶೆಯಲ್ಲಿ ತೋರಿಸಿರುವಂತೆ ರಸ್ತೆ ಇರುತ್ತದೆ ತೋರಿಸಲು ನಾನು ಯಾವುದೇ ಛಾಯಚಿತ್ರಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಹಾಥ ನಕಾಶೆಯಲ್ಲಿ ತೋರಿಸಿರುವಂತೆ ರಸ್ತೆ ಇರುತ್ತದೆ ಅಂತಾ ಲಿಖಿತ ರೂಪದಲ್ಲಿ ಯಾವುದೇ ದಾಖಲೆ ಇರುವುದಿಲ್ಲ. ಸರ್ವೆ ನಂ. 387/2, 387/1, 390/1, 382/2 ರ ಮಾಲೀಕರನ್ನು ಈ ದಾವೆಯಲ್ಲಿ ನಾನು ಪಕ್ಷಾಗಾರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ಸದರಿ ಮಾಲೀಕರು ಯಾವುದೇ ತಕಾರಾರು ಮಾಡಿಲ್ಲ ಅಂತಾ ನುಡಿಯುತ್ತಾರೆ. ಗೆಡಪ್ಪನ ಉತ್ತರ ಬದಿಗೆ ಪೂರ್ವ-ಪಶ್ಚಿಮಕ್ಕೆ ನಮ್ಮ ಜಮೀನಿನ ದಕ್ಷೀಣಕ್ಕೆ ಒಂದು ದೊಡ್ಡ ಬಾಂದರ ಇರುತ್ತದ ಎಂರದೆ ಸರಿಯಲ್ಲ. ಸದರಿ ಬಾಂದರ ಮೇಲೆ ಸುಮಾರು 10-20 ವರ್ಷಗಳ ಹಳೆಯ ಬೇವಿನ ಮರಗಳ ಇರುತ್ತವೆ ಎಂದರೆ ಸರಿಯಲ್ಲ. ಸರ್ವೆ ನಂ. 394/3/1 ಜಮೀನದಲ್ಲಿ ಒಂದು ಹೊಂಡಾ ಕೊರೆಯಿಸಿದ್ದು, ಅದು ನನ್ನ ಜಮೀನಿನಲ್ಲಿ ಇರುತ್ತದೆ. ಅದೇ ಪ್ರತಿವಾದಿಯರು ಸಹ ತಮ್ಮ ಜಮೀನಿನಲ್ಲಿ ಒಂದು ಹೊಂಡಾ ಕೊರೆಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹೊಂಡಾ ನನ್ನ ಹಾಥ ನಕಾಶೆಯಲ್ಲಿ ತೋರಿಸಿರುವ ಜಿ.ಹೆಚ್ ಜಾಗದಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಾಗುವುದಿಲ್ಲ ಅಂತಾ ನುಡಿಯುತ್ತಾರೆ. ಹಾಗಾಗಿ ನಾನು ತೋರಿಸಿರುವ ಜಾಗದಲ್ಲಿ ಯಾವುದೇ ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಕಿರಕೂಳ ಕೊಡಬೇಕೆಂಬ ದುರುದ್ದೇಶದಿಂದ ಒಂದು ಖೊಟ್ಟಿ ದಾವೆಯನ್ನು ದಾಖಲಿಸಿ ಅದಕ್ಕೆ ಅನುಗುಣವಾಗಿ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೆ. ಸರಿ ಇದೆ.**

**ಸಹಿ/-**
**ಜೆ.ಎಂ.ಎಫ್.ಸಿ. ನ್ಯಾಯಾಲಯ**
**ಇಂಡಿ.**

# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.

**OS No. 61/2019**

**PW: 2**

**ದಿನಾಂಕ 01-12-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಶ್ರೀ. ಎಸ್.ಜಿ.ಕೆ ವಕೀಲರಿಂದ :**

ನಮ್ಮ ಜಮೀನನ ಸರ್ವೆ ನಂ. 393 ಅಂತಾ ಇರುತ್ತದೆ. ವಿಠೋಬಾ ನನ್ನ ಚಿಕ್ಕಪ್ಪ. ನನ್ನ ಜಮೀನು ಹಳ್ಳದ ದಕ್ಷಿಣ ಬದಿಗೆ ಇರುತ್ತದೆ. ನನ್ನ ಜಮೀನಿನ ದಕ್ಷಿಣಕ್ಕೆ 1ನೇ ವಾದಿಯ ಜಮೀನು ಇರುತ್ತದೆ. ನನ್ನ ಮತ್ತು ವಾದಿಯರ ಜಮೀನಿನ ಬಾಂದಗಳು ಕೂಡಿ ಇರುತ್ತವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ದಕ್ಷಿಣಕ್ಕೆ ಕೂಡಿ ಇರುತ್ತವೆ ಅಂತಾ ನುಡಿಯುತ್ತಾರೆ. ನಾನು ವಾದ ಪತ್ರದೊಂದಿಗೆ ಹಾಜರುಪಡಿಸಿದ ಹಾಥ ನಕಾಶೆಯಲ್ಲಿ ತೋರಿಸಿರುವ ದಾರಿ ಮೂಲಕ ಹಾಯಿದು ನನ್ನ ಜಮೀನಿಗೆ ಹೋಗುತ್ತೇನೆ. ನನ್ನ ಜಮೀನಿನ ಪೂರ್ವ ಬದಿಗೆ 1ನೇ ವಾದಿಯ ಮಗನ ಜಮೀನು ಇರುತ್ತದೆ. ಆತನ ದಕ್ಷಿಣ ಬದಿಗೆ ಶಿವಪ್ಪನ ಮಕ್ಕಳ ಜಮೀನು ಅಂದರೆ ವಿಠೋಬಾನ ಅಣ್ಣನ ಮಕ್ಕಳು ಜಮೀನು ಬರುತ್ತವೆ. ಬಸಲಿಂಗಪ್ಪನ ಪಟ್ಟಿಯಲ್ಲಿ ಹಾಯಿದು ಪ್ರತಿವಾದಿಯರು ತಮ್ಮ ಜಮೀನಿಗೆ ಹೋಗುತ್ತಾರೆ ಎಂದರೆ ಮಾಹಿತಿ ಇಲ್ಲ. ನಾನು ಸಹ ಬಸಲಿಂಗಪ್ಪನ ಪಟ್ಟಿಯಲ್ಲಿ ಸರ್ವೆ ನಂ. 391 ಮತ್ತು 392 ರಲ್ಲಿ ದಾಟಿ ನನ್ನ ಜಮೀನಿಗೆ ಹೋಗುತ್ತೇನೆ ಎಂದರೆ ಸರಿಯಲ್ಲ. ನಾವು ವಿಠೋಬಾ, ಶಂಕರಪ್ಪ ಅವರ ಜಮೀನ ಮೂಲಕ ಹಾಯಿದು ಹೋಗುತ್ತೇವೆ ಅಂತಾ ನುಡಿಯುತ್ತಾರೆ. ಪ್ರತಿವಾದಿಯರು ನನಗೂ ಸಹ ತಕಾರಾರು ಮಾಡಿರುತ್ತಾರೆ. ಆದರೂ ಸಹ ನಾವು ಅವರ ಜಮೀನಿನಲ್ಲಿ ಹಾಯಿದು ಹೋಗುತ್ತೇವೆ. ಸಾಕ್ಷಿ ಮುಂದುವರೆದು ನಾವು ಜೋರವಾರಿಯಿಂದ ಪ್ರತಿವಾದಿ ಜಮೀನಿನಲ್ಲಿ ಹಾಯಿದು ಹೋಗುತ್ತೇವೆ ಅಂತಾ ನುಡಿಯುತ್ತಾರೆ. ನನಗೆ ಹೊಸ ಹಾದಿಯನ್ನು ಪ್ರತಿವಾದಿಯರ ಜಮೀನಿನಲ್ಲಿ ಮಾಡಿಕೊಳ್ಳಬೇಕೆಂಬ ದುರುದೇಶ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದ ಪ್ರತಿವಾದಿಯರು ಮತ್ತು 1ನೇ ವಾದಿ 10 ಅಡಿ ರಸ್ತೆಯನ್ನು ನಮಗೆ ಬಿಟ್ಟುಕೊಟ್ಟಿರುತ್ತಾರೆ ಅಂತಾ ನುಡಿಯುತ್ತಾರೆ. ಸಧ್ಯ ಸ್ಥಾನಿಕವಾಗಿ ನಾನು ಹೇಳುವಂತೆ ಯಾವುದೇ ಹಾದಿ ಇರುವುದಿಲ್ಲ ಎಂದರೆ ಸಾಕ್ಷಿ ನಾವು ಈಗಲೂ ಸಹ ಸದರಿ ರಸ್ತೆಯನ್ನು ಉಪಯೋಗಿಸುತ್ತಿದ್ದೇವೇ ಅಂತಾ ನುಡಿಯುತ್ತಾರೆ. ನಾನು ಮತ್ತು ವಾದಿಯರು

ಮಿಲಾಪೆಯಾಗಿ ಪ್ರತಿವಾದಿಯರಿಗೆ ಕಿರಕೂಳ ಕೊಡಬೇಕೆಂಬ ದುರುದ್ದೇಶದಿಂದ ಒಂದು ದಾವೆಯನ್ನು ದಾಖಲಿಸಿ ವಾದಿಯರಿಗೆ ಅನುಕೂಲ ಮಾಡಲಿ ಎಂದು ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.ಸ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೆ. ಸರಿ ಇದೆ.**
**ಸಹಿ/-**

**ಜೆ.ಎಂ.ಎಫ್.ಸಿ. ನ್ಯಾಯಾಲಯ**
**ಇಂಡಿ.**